

# ಪ್ಲಾಸ್ಟಿಕ್ ಪಳಗಿಸಿ

ಪ್ಲಾಸ್ಟಿಕ್ ಸರ್ವಾಂತರ್ಯಾಮಿ. ಅದನ್ನು ತೊಲಗಿಸುವ ಕೆಲಸ ಅಷ್ಟು ಸುಲಭವಿಲ್ಲ. ಅದನ್ನು ಪಳಗಿಸುವುದೇ ಈಗ ಹೆಚ್ಚು ಬುದ್ಧಿವಂತಿಕೆಯ ಕ್ರಮ. ಅಂತಹ ಹತ್ತಾರು ಪಳಗಿಸುವ ದಾರಿಗಳನ್ನು ಉದ್ಯಮಿಗಳು ಹುಡುಕಿಕೊಂಡಿದ್ದಾರೆ.

■ ಪ್ರವೀಣ ಕುಲಕರ್ಣಿ

ಗಗನದಲ್ಲಿ ಹಾರುವ ವಿಮಾನದಿಂದ ಹಿಡಿದು ಹೃದಯದೊಳಗಿನ ಕೃತಕ ಕವಾಟದವರೆಗೆ 'ನಾನಿಲ್ಲದೆ ನಿಮ್ಮ ಬದುಕೇ ಇಲ್ಲ' ಎನ್ನುವಂತೆ ಮಾನವನ ಬದುಕಿನ ಎಲ್ಲವನ್ನೂ ಆವರಿಸಿಬಿಟ್ಟಿದೆ ಪ್ಲಾಸ್ಟಿಕ್. ಸಾವಿಲ್ಲದ ಮನೆಯ ಸಾಸಿವೆಯನ್ನು ತರುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ, ಪ್ಲಾಸ್ಟಿಕ್ ಇಲ್ಲದ ಮನೆಯಿಂದ ಸಾಸಿವೆಯನ್ನು ತರುವುದು ಕೂಡಾ ಅಸಾಧ್ಯವೇ.

ಇವತ್ತು ಪ್ಲಾಸ್ಟಿಕ್ ಸರ್ವಾಂತರ್ಯಾಮಿ. ನೇರವಾಗಿ ನೀವು ಪ್ಲಾಸ್ಟಿಕ್‌ಅನ್ನು ಬೇಡ ಎಂದರೂ, ನಿಮಗೇ ಗೊತ್ತಿಲ್ಲದಂತೆ ಅದು ನಿಮ್ಮ ಮನೆಯೊಳಗೆ ನುಸುಳಿಬಿಟ್ಟಿರುತ್ತದೆ! ಪ್ಲಾಸ್ಟಿಕ್ ನಿಷೇಧಿಸಿ ಎಂದು ಎಷ್ಟೇ ಕೂಗಾಡಿದರೂ, ಅದನ್ನು ನಿಷೇಧಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ಮಾರುವೇಷದಲ್ಲಿ ನಿಮ್ಮ ಸನಿಹವೇ ಇರುತ್ತದೆ.

ಯಾರಿಗೆ ಗೊತ್ತು? ಯಾವತ್ತೋ ನೀವು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ತರಿಸಿದ ಮೊಬೈಲ್ ಫೋನ್‌ನ ಪ್ಯಾಕ್ ಮೇಲಿದ್ದ ಪ್ಲಾಸ್ಟಿಕ್ ಸ್ಟಿಕ್ಕರ್, ಇವತ್ತು ನೀವು ಧರಿಸಿದ ಪಾಲಿಸ್ಟರ್ ಶರ್ಟ್ ಆಗಿ ಬಂದಿರಬಹುದು! ಹಾಗೆಯೇ ಎಂದೋ ಬಸ್ಸಿನ ಕಿಟಕಿಯಿಂದ ಬಿಸಾಡಿದ ಪ್ಲಾಸ್ಟಿಕ್‌ನ ಕ್ಯಾರಿ ಬ್ಯಾಗ್, ಇನ್ನೆಂದಾದರೂ ನೀವು ಅದೇ ಬಸ್ ಏರಿದಾಗ, ಅದರ ಇಂಧನದ ಟ್ಯಾಂಕ್‌ನಲ್ಲಿ ಪೆಟ್ರೋಲ್ ರೂಪದಲ್ಲಿ ಬಂದು ಸೇರಿರಬಹುದು!

ಹೌದು, ಪ್ಲಾಸ್ಟಿಕ್‌ಅನ್ನು ಸಂಪೂರ್ಣ ನಿಷೇಧಿಸುವ ಕ್ರಿಯೆಯಲ್ಲಿ ನಾವು ವಿಫಲರಾಗಿದ್ದೇವೆ. ಆದರೆ ಅದನ್ನು ಪಳಗಿಸುವ ಕ್ರಿಯೆಯಲ್ಲಿ ಯಶಸ್ಸು ಕಾಣುತ್ತಿದ್ದೇವೆ. ಜೈವಿಕ ಕ್ರಿಯೆಯಲ್ಲಿ ಕರಗಲಾರೆ ಎನ್ನುವ ಪ್ಲಾಸ್ಟಿಕ್ ಮೇಲೆ ಎಲ್ಲರೂ ಕೋಪ ಮಾಡಿಕೊಳ್ಳುವವರೇ. ಆದರೆ, ಪ್ರತಿಸಲ ನಿಷೇಧದ ಬಾಣ ಬಿಟ್ಟಾಗಲೂ ರಕ್ತ ಬೀಜಾಸುರನಂತೆ ಪ್ಲಾಸ್ಟಿಕ್ ಬಳಕೆ ಹತ್ತಕ್ಕೆ ನೂರಾಗಿ, ನೂರಕ್ಕೆ ಸಾವಿರವಾಗಿ ಬೆಳೆಯುತ್ತಲೇ ಇದೆ. ಅದಕ್ಕೇ ಈಗ ಹೊಸ ಘೋಷಣೆ– ಪ್ಲಾಸ್ಟಿಕ್ ಪಳಗಿಸಿ!

ಪ್ಲಾಸ್ಟಿಕ್‌ನಲ್ಲಿ ಮುಖ್ಯವಾಗಿ ಎರಡು ವಿಧ. ಒಂದು, ಎಂಜಿನಿಯರಿಂಗ್; ಇನ್ನೊಂದು ಕಮಾಡಿಟಿ (ಪದಾರ್ಥ) ಪ್ಲಾಸ್ಟಿಕ್. ಎಂಜಿನಿಯರಿಂಗ್ ಪ್ಲಾಸ್ಟಿಕ್ ಅತ್ಯುನ್ನತ ಗುಣಮಟ್ಟದ್ದು (ವಿಮಾನ, ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಬಳಕೆಯಾಗುತ್ತದೆ). ಪದಾರ್ಥ ಪ್ಲಾಸ್ಟಿಕ್‌ನಲ್ಲಿ